Sri VEERENDRA PATIL.—Certainly we will investigate.

ಶ್ರೀ ಬಿ. ಕೆ. ನಾಗೂರ್.—ಲಾರಿ ಇದುವರೆಗೂ ಸಿಕ್ಕಿಲ್ಲವೆಂದು ಹೇಳಿದಿರಿ. ಇವತ್ತಿನವರೆಗೂ ಸಿಕ್ಕಿಯೇ ಇಲ್ಲವೇ ?

ಅಧ್ಯಕ್ಷರು.—ಅವರು ಹೇಳಿದುದರ ಅರ್ಥವೇ ಅದು.

ಶ್ರೀ ಬಿ. ಕೆ. ನಾಗೂರ್.—ಹಾಗಾದರೆ ಹುಡುಕುವುದಕ್ಕೆ ಪ್ರಯತ್ನಿಸುತ್ತಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—(C) ರಿಪೋರ್ಟ್ ಕೊಟ್ಟಮೇಲೆ ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾವ ಪ್ರಯತ್ನವಾಡಬಹುದೋ ಅದನ್ನೆಲ್ಲಾ ಆಗಲೇ ಮಾಡಿದ್ದಾರೆ.

Sri G. SIVAPPA.—Is it not a fact that accidents are common on that road ?

Mr. SPEAKER.—It is outside the scope of the question.

Sri G. DUGGAPPA.—Was the information about this accident flashed to all the important police stations on this National Highway right upto Belgaum.

Sri VEERENDRA PATIL.—Soon after the police received the information about this accident, they contacted the police on the border, conveyed this information and asked them to make a report of any damage.

Primary and Middle Schools with their Strength in the State.

Q.—963. Sri A. R. BADRI NARAYAN (Thirthahalli).—

Will the Government be pleased to state :—

(*a*) the total number of primary and middle schools in the State ;

(*b*) the total number of pupils studying therein ?

A.—Sri V. VENKATAPPA (Minister for Education).—

	Primary including N.T.M. Schools	*Middle Schools*
(*a*)	21,181	879
(*b*)	15,43,954	1,73,170

Sri A. R. BADRI NARAYAN.—Is the survey made of the total number of pupils of school-going age ?

Sri V. VENKATAPPA.—Yes.

Sri A. R. BADRI NARAYAN.—What is the total number of pupils of school-going age?

Sri V. VENKATAPPA.—26,91,900.

Sri A. R. BADRI NARAYAN.—It is stated in the answer that the number of pupils studying in the primary schools is to the tune of 15,43,954. How do you propose to make up the deficit of 12 lakhs ?

Sri V. VENKATAPPA.—By giving schools.

Sri A. R. BADRI NARAYAN.—Are there any applications from any area where schools have not been given?

Sri V. VENKATAPPA.—There are applications from here and there.

Sri C. M. ARUMUGHAM.—How many of them are aided and how many are Government schools?

Sri V. VENKATAPPA.—I want notice.

Sri C. K. RAJAIAH SETTY.—Out of the primary schools, how many are pucca buildings and how many are kutcha buildings?

Mr. SPEAKER.—That is outside the scope of the question.

ಶ್ರೀ ಬಿ. ಚಾಮಯ್ಯ.—1,681 ಸ್ಕೂಲುಗಳ ಹೈಕ ಹಳೆಯ ಮೈಸೂರಿನಲ್ಲಿ ಎಷ್ಟಿವೆ, ಹೊಸ ಮೈಸೂರಿನಲ್ಲಿ ಎಷ್ಟಿವೆ ?

ಶ್ರೀ ವಿ. ವೆಂಕಟಪ್ಪ.—ಹಳೆಯ ಮೈಸೂರಿನಲ್ಲಿ 11,499 ಪ್ರೈಮರಿ ಸ್ಕೂಲ ಗಳೂ 779 ಮಿಡ್ಲ್ ಸ್ಕೂಲುಗಳೂ ಇವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—Total number of Primary Schools ಎಷ್ಟೆಂದು ಕೇಳಿದ್ದಕ್ಕೆ Primary including N.T.M. Schools ಎಂದು ಉತ್ತರ ಕೊಟ್ಟಿದೆ. ಬರೀ ಪ್ರೈಮರಿ ಸ್ಕೂಲುಗಳೆಷ್ಟು ?

ಶ್ರೀ ವಿ. ವೆಂಕಟಪ್ಪ.—800 N.T.M. ಸ್ಕೂಲುಗಳನ್ನು ಕಳೆದರೆ ಬಾಕಿಯದು ಪ್ರೈಮರಿ ಸ್ಕೂಲುಗಳ ಸಂಖ್ಯೆ.

ಶ್ರೀ ಎಸ್. ಆರ್. ರಾಮಯ್ಯ.—ಗ್ರಾಮಾಂತರ ಗಳಲ್ಲಿ ಪಾಠಶಾಲೆಗಳು ಕಡಮೆಯಿದ್ದು, ಓದುವ ಹುಡುಗರ ಸಂಖ್ಯೆ ಕಡಮೆಯಾಗುವುದಕ್ಕೆ ಕಾರಣವಾಗಿದೆಯಲ್ಲವೇ ?

ಅಧ್ಯಕ್ಷರು.—ಆ ಪ್ರಶ್ನೆ ಇದರಿಂದ ಬರುವುದಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಕಟ್ಟಡಗಳ ಸಂಖ್ಯೆ ಕಡಮೆಯಾಗಿರುವುದರಿಂದ ಓದುವ ಹುಡುಗರ ಸಂಖ್ಯೆ ಕಡಮೆ ಬೀಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಅದೂ ಒಂದು ಕಾರಣವಿರಬಹುದು.

ಶ್ರೀ ಕುಂದೂರು ರುದ್ರಪ್ಪ.—ಸರ್ಕಾರದವರನ್ನು ಪ್ರಾರ್ಥಿಸಿಕೊಂಡಾಗ ಕಟ್ಟಡ ಕಟ್ಟಿಸಿ ಕೊಡುವುದಕ್ಕೇನಾದರೂ ಏರ್ಪಾಡು ನಡೆದಿದೆಯೇ ?

(*No answer*).

ಶ್ರೀ ಕುಂದೂರು ರುದ್ರಪ್ಪ.—ಇಷ್ಟು ಸ್ಕೂಲುಗಳಿವೆಯೆಂದು ಹೇಳಿದಿರಿ. ಈ ಸ್ಕೂಲುಗಳೆಲ್ಲಾ ಸ್ಕೂಲ್ ಬಿಲ್ಡಿಂಗ್‌ಗಳಲ್ಲೇ ಇವೆಯೋ ಅಥವಾ ದೇವಸ್ಥಾನಗಳಲ್ಲಿ, ಚಾವಡಿಗಳಲ್ಲಿರುವುವೂ ಸೇರಿವೆಯೋ ?

ಶ್ರೀ ವಿ. ವೆಂಕಟಪ್ಪ.—ಎಲ್ಲಾ ತರಹೆಯವೂ ಇವೆ. ಸ್ಕೂಲು ಕಟ್ಟಡ, ಚಾವಡಿ, ದೇವಸ್ಥಾನ—ಎಲ್ಲವು ಗಳಲ್ಲೂ ಇವೆ.

ಶ್ರೀ ಕುಂದೂರು ರುದ್ರಪ್ಪ.—ಹಾಲ ಸ್ಕೂಲು ಬಿಲ್ಡಿಂಗ್‌ಗಳಲ್ಲರುವುವು ಎಷ್ಟು, ದೇವಸ್ಥಾನ, ಚಾವಡಿಗಳಲ್ಲರುವುವು ಎಷ್ಟು ?

ಅಧ್ಯಕ್ಷರು.—ಅದನ್ನೆಲ್ಲಾ ಈಗ ಹೇಳುವುದಕ್ಕಾಗು ವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ನಚಿವರು ಹೇಳಿದರು, ಕೆಲವು ಸ್ಕೂಲುಗಳು ದೇವಸ್ಥಾನ, ಚಾವಡಿಗಳಲ್ಲವೆ ಯೆಂದು. ಸ್ಕೂಲು ಬಹಳ ಅವಶ್ಯಕವಾಗಿರುವ ಕಡೆ ಜಾಗ್ರತೆ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಅದು ಇಲ್ಲ ಬರುವುದಿಲ್ಲ.

Construction of Vijayapur-Mallur Road.

Q.—1448. Sri S. R. RAMAIAH (Hosakote).—

Will the Government be pleased to state :—

(*a*) the period that has elapsed since the estimates for the construction of a road from Vijayapur, Devanahalli Taluk and Mallur were prepared ;

(*b*) the period required for the completion of the construction of the abovementioned road?

A.—Sri H. K. VEERANNA GOWDH (Minister for Public Works).—

(*a*) No estimates have yet been prepared.

(*b*) Cannot be said at present.

ಶ್ರೀ ಎಸ್. ಆರ್. ರಾಮಯ್ಯ.—(*a*) ಭಾಗಕ್ಕೆ ಉತ್ತರವಾಗಿ ಎಸ್ಟಿಮೇಟ್ ತಯಾರಾಗಿಲ್ಲವೆಂದು ಹೇಳಿದ್ದೀರಿ. 1957ನೆಯ ಅಕ್ಟೋಬರಿನ ಅಧಿವೇಶನ ದಲ್ಲಿ ಕೊಟ್ಟ ಒಂದು ಪ್ರಶ್ನೆಗೆ ಉತ್ತರವಾಗಿ 85,000 ರೂಪಾಯಿಗಳ ಎಸ್ಟಿಮೇಟ್ ತಯಾರಾಗಿದೆಯೆಂದು ಹೇಳಿದ್ದೀರಿ. ಇದಕ್ಕೇನು ನಮಜಾಯಿಷಿ ಹೇಳು ತ್ತೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಹಳೆಯದು. ಈಗ ಬೇರೆ ಎಸ್ಟಿಮೇಟ್ ಮಾಡಿಸಬೇಕು.

ಶ್ರೀ ಎಸ್. ಆರ್. ರಾಮಯ್ಯ.—ಎಸ್ಟಿಮೇಟ್ ಆಗಿಯೇ ಇಲ್ಲವೆಂದು ಹೇಳಿದ್ದೀರಲ್ಲಾ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹೊಸದಾಗಿ ಮಾಡಿಲ್ಲ ; ಆಗ ಮಾಡಿದ್ದು up-to-date ಅಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಹಿಂದೆ ಜಾಗ್ರತೆ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡಲಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಭರವಸೆಯ ಮೇಲೆ ಕೆಲಸ ನಡೆಯುವುದಿಲ್ಲ. Actual ಆಗಿ work ಆಗಬೇಕು. ನೀವೇನೋ ಕೇಳುತ್ತೀರಿ, 'ನೋಡೋಣ' ಎನ್ನುತ್ತೇವೆ. ಅದನ್ನೇ ಭರವಸೆಯೆಂದು ತಿಳಿದು ಕೊಂಡರೆ ಏನು ಮಾಡುವುದು.

ಶ್ರೀ ಬಿ. ರಾಚಯ್ಯ.—ಈ ರಸ್ತೆ ಪಿ.ಡಬ್ಲ್ಯು.ಡಿ.ಗೆ ಸೇರಿದ್ದೇ, ಇಂಟರ್ ವಿಲೇಜ್ ಕಮ್ಯೂನಿಕೇಷನ್ನಿಗೆ ಸೇರಿದ್ದೇ ಅಥವಾ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದ್ದೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ರೋಡು.

ಶ್ರೀ ಬಿ. ರಾಚಯ್ಯ.—ಡಿಸ್ಟ್ರಿಕ್ಟ್ ಬೋರ್ಡು ರಸ್ತೆ ಯೆಂದರೆ, ಇದಕ್ಕಾಗಿ ಸ್ಪೆಷಲ್ ಗ್ರಾಂಟ್ ಏನಾದರೂ ಕೊಡುತ್ತಿದ್ದೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರು ಕೇಳಿಯೇ ಇಲ್ಲ. ಮಿನಿಸ್ಟರುಗಳು ಯಾರಾದರೂ ಅತ್ತಕಡೆ ಹೋದರೆ ಕೇಳುತ್ತಾರೆ ಅಷ್ಟೆ.

ಶ್ರೀ ಕುಂದೂರು ರುದ್ರಪ್ಪ.—ಇದು ಡಿಸ್ಟ್ರಿಕ್ಟ್ ಬೋರ್ಡ್ ರೋಡ್ ಎಂದಮೇಲೆ, P.W.D. ಮಂತ್ರಿ ಗಳೇಕೆ ಈ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಕೆಲಸಗಳಲ್ಲೂ ಸಣ್ಣ ಕೆಲಸಗಳಲ್ಲದೆ, ದೊಡ್ಡ ಕೆಲಸಗಳಾದರೆ ಅವೂ P.W.D.ಗೇ ವಹಿಸಲ್ಪಡು ತ್ತವೆ.

ಶ್ರೀ ಎಸ್. ಆರ್. ರಾಮಯ್ಯ.—ಈ ಪ್ರಶ್ನೆಗೆ ಉತ್ತರ ಕೊಡುತ್ತಿರುವ ರೀತಿಯನ್ನು ನೋಡಿದರೆ, ಈ ರಸ್ತೆ ಸರ್ಕಾರದವರ ಗಮನಕ್ಕೇ ಬಂದಿಲ್ಲವೆಂದು ಕಾಣುತ್ತದೆಯಲ್ಲವೇ ?

ಅಧ್ಯಕ್ಷರು.—ಸರ್ಕಾರದವರ ಗಮನಕ್ಕೆ ಬಂದಂತೆ ಕಾಣುವುದಿಲ್ಲ ಎಂದು ನೀವು ಹೇಳಬೇಕಾಗಿಲ್ಲ. ತಾವು ಪ್ರಶ್ನೆ ಕೇಳಿ.

ಶ್ರೀ ಎಸ್. ಆರ್. ರಾಮಯ್ಯ.—ಈ ವಿಚಾರದಲ್ಲಿ ಅನೇಕ ಪ್ರಾರ್ಥನೆಗಳೂ ಬಂದಿವೆ. ಅನೇಕವೇಳೆ accident ಗಳು ನಡೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಈ ಜಿಲ್ಲಾ ಬೋರ್ಡ್ ರಸ್ತೆಯನ್ನು ಕಾಪಾಡುವುದಕ್ಕೆ ಸರ್ಕಾರದವರು ಗ್ರಾಂಟು ಕೊಡುತ್ತಾರೆಯೇ ಅಥವಾ ಇಲ್ಲವೇ ?

ಅಧ್ಯಕ್ಷರು.—ಅದು ಬಹಳ ಸಾಮಾನ್ಯ ಪ್ರಶ್ನೆ.

Technical Schools proposed to be opened at Karwar, Belgaum, Dharwar and Bijapur Districts.

Q.—1602. Smt. LEELAVATHI MAGADI (Shirahatti).—

Will the Government be pleased to state :—

the number of technical schools proposed to be opened at Dharwar, Karwar, Bijapur and Belgaum districts ?

A.—Sri V. VENKATAPPA (Minister for Education).—

No new Technical High Schools are proposed to be opened during the current year.